ಡೈರಿ ವಿಶ್ವನಾಥ್, ಬೆಂಗಳೂರು

*ದೀರ್ಘಾಯುಷ್ಯ ಪಡೆಯಲು ಗುಟ್ಟೇನು?*



ಮೊಬೈಲ್ ನೋಡದೆಯೇ ರಸ್ತೆ ದಾಟುವುದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಅತಿಯಾದರೆ ಅಮೃತವೂ ವಿಷ ಎಂದಿರುವಾಗ ರಾಜಕಾರಣಿಗಳು ಇನ್ನಷ್ಟು ಗಳಿಸಬೇಕು ಎನ್ನುವುದೇಕೆ?*

ವಿಷಜಂತುಗಳಿಗೆ ವಿಷ ಎಷ್ಟಿದ್ದರೂ ಹೆಚ್ಚೆನಿಸದಿರುವುದು ಪ್ರಕೃತಿ ನಿಯಮ.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ರಾಜಕೀಯದಲ್ಲಿ ಗೆದ್ದು ಬಂದವರು ಆಸ್ತಿ ಮಾಡಿಕೊಳ್ಳಲೇ ಕೂಡದೆಂದು ನಿಯಮ ವಿಧಿಸಿದ್ದೇ ಆದರೆ...?*

ಪೊಲಿಟಿಷಿಯನ್ನಿನ ಪಾಮರೇನಿಯನ್ನೂ ಪಾರ್ಲಿಮೆಂಟಿನತ್ತ ಮೂಸಿ ನೋಡಲ್ಲ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಅಂಧಕಾರ ತೊಲಗಿಸಲು ಜ್ಯೋತಿ ಬೆಳಗಿಸಬೇಕು. ಭ್ರಷ್ಟಾಚಾರ ತೊಲಗಿಸಲು?*



ನೀತಿ ಬೆಳಗಿಸಬೇಕು, ಪಳಗಿಸಬೇಕು.

ಮಂಜು ಜಿ. ಹಗರಿಬೊಮ್ಮನಹಳ್ಳಿ

*ಮೀನಿನ ಬಲೆಗಳು ನೀರನ್ನು ಹಿಡಿದಿಡಲಾಗದು. ಯಾಕೆ?*

ಮೀನುಗಳು ಆತ್ಮಹತ್ಯೆ ಮಾಡಿಕೊಳ್ಳಲೆಂದೇ ಬಲೆಗೆ ಬೀಳುವುದರಿಂದ ನೀರನ್ನು ಉಗಿದುಬಿಡುತ್ತವಂತೆ.

ನರಸಿಂಹ ಪೈ, ಕಾಸರಕೋಡ

*ಪೋಸ್ಟ್ ಮಾಸ್ಟರ್‌ಗೂ, ಸ್ಕೂಲ್ ಮಾಸ್ತರ್‌ಗೂ ಏನು ಅಂತರ?*

ಪೋಸ್ಟ್ ಮಾಸ್ಟರ್ ಲವ್ ಲೆಟರ್ ಕಂಡರೆ ಕೆಂಡ ಕಾರುವುದಿಲ್ಲ.

ವಿ. ಹಮೀದ್, ವಿಟ್ಲ

*ಗೂಗಲ್‌ನಲ್ಲಿ ಲವ್, ಇ-ಮೇಲ್‌ನಲ್ಲಿ ಮ್ಯಾರೇಜ್ ಆದರೆ ಫ್ಯಾಮಿಲಿ?*

ಟ್ರ್ಯಾಷ್/ರೀಸೈಕಲ್ ಬಿನ್‌ನಲ್ಲಿ.

ವಿ. ಹೇಮಂತಕುಮಾರ್, ಬೆಂಗಳೂರು

*ಪೆಗ್ ಹಾಕುವುದಕ್ಕೂ, ವಿಗ್ ಹಾಕುವುದಕ್ಕೂ ವ್ಯತ್ಯಾಸವೇನು?*

ಕಿಕ್‌ಗೊಂದು, ಲುಕ್‌ಗೊಂದು!

ಎಚ್. ಆನಂದಕುಮಾರ್, ಚಿತ್ರದುರ್ಗ

*ಅವರ ಮನೆಯಲ್ಲಿ ಉಂಡೆ, ಇವರ ಮನೆಯಲ್ಲಿ ಮಲಗಿದೆ ಎನ್ನುತ್ತಾ ಮುಖಂಡರು ಊರೂರು ಅಲೆವರಲ್ಲಾ...?*

ಹ್ಞ! ಅದು 'ಅವರ ಹಿತವನ್ನೇ ಉಂಡೆ, ಇವರ ಮನೆಯನ್ನೇ ಮುಳುಗಿಸಿದೆ' ಎನ್ನುವುದರ ಮುನ್ನುಡಿ.

ಮುರಲೀಧರ ಕುಲಕರ್ಣಿ, ಬೀದರ್

*ಅಪರಾಧಶಾಸ್ತ್ರ ವಿಭಾಗದ ಪ್ರಾಧ್ಯಾಪಕರಿಂದ ಸ್ತ್ರೀಯೊಬ್ಬಳ ರೇಪ್; ಈ ಸುದ್ದಿಯನ್ನು ಹೇಗೆ ಅರ್ಥೈಸಿಕೊಳ್ಳಬೇಕು?*

ಅದು ಅವರು ಕಾನೂನನ್ನು ಅನುಭವಿಸಿ ಅರಿಯುವ ಪರಿಯಂತೆ.

ರಚನಾ ಬಿ.ಎಮ್., ತಿಪಟೂರು

*ಬಲಗಾಲಿಟ್ಟು ಒಳಗೆ ಬಾ ಎನ್ನುತ್ತಾರಲ್ಲಾ, ಹಾಗಾದರೆ ಎಡಗಾಲಿಗೂ, ಬಲಗಾಲಿಗೂ ಏನು ವ್ಯತ್ಯಾಸ?*

ಎಡಕ್ಕಿರುವ ಹೃದಯದ ರಕ್ಷಣೆ ಬಲಕ್ಕೆ ಸೇರಿದ್ದು. ಎಡ ರಾಜ; ಬಲ ಸೈನಿಕ; ಎಂದಿಗೂ ಸೈನಿಕನೇ ಮುಂದು.

ಎನ್. ಗೋಪಾಲರಾವ್, ಬೆಂಗಳೂರು

*ಇಲ್ಲೊಬ್ಬಾತ ತನ್ನ ಹೆಂಡತಿಗೆ ತರುವಂತಹ ಸೀರೆ ಬಟ್ಟೆಗಳನ್ನೇ ಮನೆ ಕೆಲಸದಾಕೆಗೂ ತರುತ್ತಾನೆ. ಏನಿದರ ರಹಸ್ಯ?*

ಇಂದಿನ ದಿನಗಳಲ್ಲಿ ಕೆಲಸದಾಕೆಯೇ ಗಂಡ–ಹೆಂಡಿರನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾಳೆ ಎಂಬುದು.

## ಬಹುಮಾನಿತ ಪ್ರಶ್ನೆ

ವಿ.ಕೆ. ರಾಮಗುಂಡಿ, ಬೈಲಹೊಂಗಲ

*ಕನ್ನಡಕ್ಕಾಗಿ ನಾವು ತೋರುವ ನಿಜವಾದ ಪ್ರೀತಿ, ಗೌರವ ಹೇಗಿರಬೇಕು ಗುರುಗಳೇ?*

ಉಚ್ಚಾರಕ್ಕೆ ಅಪಚಾರವಾಗದಷ್ಟು ಅಕ್ಷರದ ಅಕ್ಕರೆ ಇದ್ದರೆ ಸಾಕೇ ಸಾಕು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಎಟಿಎಮ್ ಪ್ರೀತಿ ಎಂದರೆ ನಿಜವಾದ ಅರ್ಥವೇನು?*

ಎ– ಅಜ್ಜಿ; ಟಿ– ತಾತ; ಎಮ್– ಮೊಮ್ಮಕ್ಕಳ ಪ್ರೀತಿ!

ವಿದ್ಯಾ ಎನ್. ಪೈ, ಕಾಸರಕೋಡ

*ಆಟಗಳಲ್ಲಿ ಅತ್ಯಂತ ಕೆಟ್ಟ ಆಟ 'ಜೂಜಾಟ'. ಏಕೆ?*

ದಾಳ ಹೊರಳಿದಂತೆ ಬಾಳು ಉರುಳಿ ಉರುಳಾಗುವುದರಿಂದ.

ಫಾಲನೇತ್ರ ಸಜ್ಜನ, ಶಿರಸಿ

*ಪ್ರೇಮಿಗಳು ಬಸ್ಸಿನಲ್ಲೇ ಹೋದರೂ ಓಡಿಹೋದರು ಎನ್ನಲು ಕಾರಣವೇನು?*



ಪ್ರೇಮಿಗಳಿಗೆ ಪ್ರೇಮಿಸುವುದೇ ಡ್ಯೂಟಿ; ಸರ್ಕಾರಿ ಭಾಷೆಯಲ್ಲಿ ಓಡಿ ಎಂದರೆ 'ಆನ್ ಡ್ಯೂಟಿ'!

ಪಿ.ಜಿ. ರಾಜ್, ಶಿವಮೊಗ್ಗ

*ಚುನಾವಣೆ ಹತ್ತಿರ ಬರುತ್ತಿದ್ದಂತೆ ಭಾಗ್ಯಗಳ ಸೇವೆ ತುಂಬಾ ಆಗುತ್ತಿದೆ. ಕಾರಣವೇನು?*

ಸಂವಿಧಾನದಿಂದ, ವಿಧಾನದಿಂದ ಸಂಪಾದಿಸಲಾಗದ್ದನ್ನು ದಾನದಿಂದ ಗಳಿಸುವ ಹುನ್ನಾರ.

ಭಾರತಿ ಮಾನಗೆ, ಹೊನ್ನಾವರ

*ಲ್ಯಾಂಡ್ ಫೋನ್‌ಗೂ, ಮೊಬೈಲ್ ಫೋನ್‌ಗೂ ಏನು ವ್ಯತ್ಯಾಸ?*

ಅದು ಇದ್ದಲ್ಲೇ ಒಟಗುಟ್ಟುವ ಹಿರಿಯ; ಇದು ಎತ್ತಿಕೊಂಡಿರುವಾಗಲೂ ಕಿರಲುವ ಕೈಮಗು.

■ ರಾಮ್